ಸರ್ಕಾರವು ಪ್ರಕಟಿಸಿರುವ ಅಲ್ಪ ಸಂಖ್ಯಾತರ ಕ್ಷೇತ್ರದ ಪಟ್ಟಿ-1

1)	ಬೆಂಗಳೂರು ಜಿಲ್ಲೆ	ತಮಿಳು ಮತ್ತು ಉರ್ದು
2)	ಬೆಳಗಾವಿ ಜಿಲ್ಲೆ	ಮರಾಠಿ
3)	ಬಳ್ಳಾರಿ ಜಿಲ್ಲೆ	ತೆಲುಗು ಮತ್ತು ಉರ್ದು
4)	ಬೀದರ್ ಜಿಲ್ಲೆ	ಉರ್ದು ಮತ್ತು ಮರಾಠಿ
5)	ಬಿಜಾಪುರ ಜಿಲ್ಲೆ	ಉರ್ದು
6)	ಚಿತ್ರದುರ್ಗ ಜಿಲ್ಲೆ	ತೆಲುಗು
7)	ದಕ್ಷಿಣ ಕನ್ನಡ ಜಿಲ್ಲೆ	ಮಲಿಯಾಳಂ
8)	ಗುಲ್ಬರ್ಗಾ ಜಿಲ್ಲೆ	ತೆಲುಗು ಮತ್ತು ಉರ್ದು
9)	ಕೊಡಗು ಜಿಲ್ಲೆ	ಮಲಿಯಾಳಂ
10)	ಕೋಲಾರ ಜಿಲ್ಲೆ	ತಮಿಳು, ತೆಲುಗು ಮತ್ತು ಉರ್ದು
11)	ಮೈಸೂರು ಜಿಲ್ಲೆ	ತಮಿಳು
12)	ರಾಯಚೂರು ಜಿಲ್ಲೆ	ತೆಲುಗು ಮತ್ತು ಉರ್ದು
13)	ಶಿವಮೊಗ್ಗ ಜಿಲ್ಲೆ	ಉರ್ದು
14)	ತುಮಕೂರು ಜಿಲ್ಲೆ	ತೆಲುಗು
15)	ಉತ್ತರ ಕನ್ನಡ ಜಿಲ್ಲೆ	ಉರ್ದು ಮತ್ತು ಮರಾಠಿ
16)	ಧಾರವಾಡ ಜಿಲ್ಲೆ	ಉರ್ದು

ವಿಷಯ :- ಬೆಂಗಳೂರು ನಗರದ ಉದ್ಯಾನವನಗಳಲ್ಲಿ ಭಾನುವಾರದಂದು ನಗರ ಪಾಲಿಕೆಯವರಿಂದ ಆರ್‌ಕೆಸ್ಟ್ರಾ ವಾದ್ಯಗೋಷ್ಠಿ ಮತ್ತು ಇತರೆ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 630 (830)

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದ ಕಬ್ಬನ್ ಪಾರ್ಕ್ ಚಿಕ್ಕಲಾಲ್‌ಬಾಗ್, ಲಾಲ್‌ಬಾಗ್ ಮತ್ತು ಇತರೆ ಉದ್ಯಾನವನಗಳಲ್ಲಿ ಭಾನುವಾರಗಳು ಮತ್ತು ಇತರೆ ರಜಾ ದಿನಗಳಲ್ಲಿ ಬೆಂಗಳೂರು ನಗರ ಪಾಲಿಕೆಯು ಆರ್‌ಕೆಸ್ಟ್ರಾ ವಾದ್ಯಗೋಷ್ಠಿ ಮತ್ತು ಇತರೆ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆಯೇ ?

ಆ) ಇಲ್ಲದಿದ್ದರೆ, ಸ್ಥಳೀಯ ಕಲಾವಿದರಿಗೆ ಉತ್ತೇಜನ ಕೊಡುವ ಸಲುವಾಗಿ ಮತ್ತು ಜನರಿಗೆ ಮನರಂಜನೆಯನ್ನು ಒದಗಿಸುವ ಸಲುವಾಗಿ ವಾದ್ಯ ಸಂಗೀತಗಾರರು ದೊರೆಯುವ ಬೆಂಗಳೂರು ನಗರದ ಎಲ್ಲಾ ಉದ್ಯಾನವನಗಳಲ್ಲೂ ಭಾನುವಾರ ಮತ್ತು ಇತರ ರಜಾ ದಿನಗಳಲ್ಲಿ ಆ ರೀತಿಯ ಕಾರ್ಯಕ್ರಮಗಳನ್ನು ಏರ್ಪಡಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :-

ಅ) ಇಲ್ಲ.

ಆ) ಆ ರೀತಿಯ ಪ್ರಸ್ತಾವನೆ ಯಾವುದೂ ಸರ್ಕಾರದ ಮುಂದೆ ಇರುವುದಿಲ್ಲ.

ವಿಷಯ :- ನಗರ ಪಾಲಿಕೆಯಲ್ಲಿ ಬಾಕಿ ಉಳಿದಿರುವ ಕಟ್ಟಡ ನಕ್ಷೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 632 (998)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) :- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರ ಪಾಲಿಕೆಯಲ್ಲಿ ಬಾಕಿ ಉಳಿದಿರುವ ಕಟ್ಟಡದ ನಕ್ಷೆಗಳ ಸಂಖ್ಯೆ ಎಷ್ಟು ?

ಆ) ಕಳೆದ ಮೂರು ವರ್ಷಗಳಲ್ಲಿ ಅಂದರೆ ಮಾರ್ಚ್ 90 ರ ವರೆಗೆ ಕಟ್ಟಡಕ್ಕೆ ಮಂಜೂರಾತಿ ನೀಡಿರುವ ನಕ್ಷೆಗಳ ಸಂಖ್ಯೆ ಎಷ್ಟು ? (ವಾಣಿಜ್ಯ/ವಸತಿ ಮತ್ತು ಇತರೆ ವಿಘಟನೆ ಮಾಹಿತಿಯನ್ನು ಒದಗಿಸುವುದು)

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ 31–3–1990 ರ ವರೆಗೆ 313 ಎಲ್.ಪಿ. ಕಡತಗಳು ಬಾಕಿ ಇರುತ್ತವೆ.

ಆ) 1987 ರಿಂದ ಮಾರ್ಚ 1990 ರ ವರೆಗೆ ಈ ಕೆಳಕಂಡಂತೆ ನಕ್ಷೆಗಳನ್ನು ಮಂಜೂರು ಮಾಡಲಾಗಿರುತ್ತದೆ.

ವರ್ಷ	ವಾಣಿಜ್ಯ	ವಸತಿ ಮತ್ತು ಇತರೆ	ಒಟ್ಟು
1987–88	320	6041	6361
1988–89	282	6128	6410
1989–90	246	6078	6324

ವಿಷಯ :– ರಾಯಚೂರು ಜಿಲ್ಲೆಯ ನಗರಗಳಿಗೆ ಕುಡಿಯುವ ನೀರಿನ ಯೋಜನೆ ಮಂಜೂರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 634 (1080)

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ (ಕೊಪ್ಪಳ) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಯಚೂರು ಜಿಲ್ಲೆಯ ಕೊಪ್ಪಳ, ಗಂಗಾವತಿ, ಸಿಂಧನೂರು, ಮಾನ್ವಿ ಹಾಗೂ ರಾಯಚೂರು ನಗರಗಳಿಗೆ ಕುಡಿಯುವ ನೀರಿನ ಯೋಜನೆ ಮಂಜೂರಾಗಿದೆಯೇ ?

ಆ) ಹಾಗಿದ್ದಲ್ಲಿ ಯಾವ ಯೋಜನೆಯಡಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

ಅ) ರಾಯಚೂರು ನಗರದ ಜೊತೆಗಾಗಿ ಕೊಪ್ಪಳ, ಗಂಗಾವತಿ, ಸಿಂಧನೂರು, ಮಾನ್ವಿ ಪಟ್ಟಣಗಳ ಕುಡಿಯುವ ನೀರಿನ ಯೋಜನೆಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ರಾಯಚೂರು ನಗರ ನೀರು ಸರಬರಾಜು ಅಭಿವೃದ್ಧಿ ಯೋಜನೆಯನ್ನು ತಯಾರಿಸಲಾಗಿದ್ದು ತಾಂತ್ರಿಕ ಪರಿಶೀಲನೆಯಲ್ಲಿರುತ್ತದೆ. ಸದ್ಯದಲ್ಲಿಯೇ ಮಂಡಲಿಯ ತಾಂತ್ರಿಕ ಮಂಜೂರಾತಿ ದೊರೆತ ನಂತರ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಗೆ ಪರಿಶೀಲಿಸಲಾಗುವುದು.

ಆ) ಮೇಲಿನ ಯೋಜನೆಗಳನ್ನು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ ತಗದುಕೊಂಡಿದ್ದು ಈ ಕೆಳಕಂಡಂತೆ ಹಣವನ್ನು 1990–91 ನೇ ಸಾಲಿಗೆ ಬಿಡುಗಡೆ ಗೊಳಿಸಲಾಗಿದೆ.

1) ಕೊಪ್ಪಳ ರೂ. 10.00 ಲಕ್ಷಗಳು
2) ಗಂಗಾವತಿ ರೂ. 10.00 ಲಕ್ಷಗಳು.
3) ಸಿಂಧನೂರು ರೂ. 20.00 ಲಕ್ಷಗಳು.
4) ಮಾನ್ವಿ ರೂ. 10.00 ಲಕ್ಷಗಳು.
5) ರಾಯಚೂರು ರೂ. —

ವಿಷಯ :– ರಾಜ್ಯಾದ್ಯಂತ ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಭರ್ತಿ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 635 (1295)

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ?

2) ಸೀನಿಯಾರಿಟಿ ಕಂ ಮೆರಿಟ್ ಆಧ್ಯರ್ಥಿಗಳ ಸಂದರ್ಶನ ಇಲ್ಲದೆ ನೇರವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಸರ್ಕಾರಕ್ಕೆ ತೊಂದರೆ ಏನು ?